ನೀನು ಕಾಲೂರಿ ನಡೆಯತೊಡಗಿದಂತೆಲ್ಲ, ಆ ತಿಂಡಿಗಳನ್ನು ಜೋಪಾನವಾಗಿ ನಿನಗೆ ತರುತ್ತಿದ್ದೆ. ಯಾರ ಮನೇಲಾದರೂ ಅಪರೂಪದ ತಿನಿಸು ಕೊಟ್ಟರೆ, ಅವರ ಮನೆಕೆಲಸ ಮಾತ್ರ ಮಾಡಿ ಓಡಿ ಬಂದು ನಿನಗೆ ತಿನಿಸಿ, ನಾನು ನೀರು ಕುಡಿದು ಓಡುತ್ತಿದ್ದೆ. ಪಾದದಲ್ಲಿ ನೆಪಕ್ಕೆ ಇದ್ದ ಹವಾಯಿ ಚಪ್ಪಲಿ ದಾಟಿ, ಕಲ್ಲು ಒತ್ತಿ ಹಿಮ್ಮಡಿ ಒಡೆದು ನೆತ್ತರು ಬಸಿದರೂ, ನಿನ್ನ ಕಣ್ಣ ಹೊಳಪು ನನ್ನ ಕಾಯುತ್ತಿತ್ತು. ನೀನು, ನನಗಂಟಿಕೊಂಡೇ ಬೆಳೆದವ. ನಿನ್ನ ಅಪ್ಪ, ಅಜ್ಜಿ ಯಾರೂ ಬೇಕಿರಲಿಲ್ಲ ನಿನಗೆ. ಮಲಗಲು—ಹೊದೆಯಲು ನನ್ನ ಹರಕು ಸೀರೆಯ ತುಂಡೇ ಬೇಕು. ರಾತ್ರಿಯೆಲ್ಲ ಮೊಲೆ ಕುಡಿಯುತ್ತ, ಬಾಚಿ ತಬ್ಬಿ ಮಲಗುತ್ತಿದ್ದೆ ಕಂದ ನೀ. ನೀನು ಹೀಗಾದಿ ಎಂದರೆ ಹೇಗೆ ನಂಬಲಿ? ಎಂದೋ ಶಾಲೆಗೆ ಹೋದ ಆ ದಿನಗಳಲ್ಲಿ ಕಥೆ ಹೇಳಿದ್ದೆ. ಅರ್ನೆಸ್ಟೋ ಎಂಬ ಹುಡುಗ ಗರಿಬಾಲ್ಡಿಯಾಗಿದ್ದನಂತೆ. ಏಸುವನ್ನು ಹಿಡಿದುಕೊಟ್ಟವನ ಚಿತ್ರ ಬರೆಯಲು ಮೈಕಲ್ ಏಂಜೆಲೊಗೆ ಸಿಕ್ಕ ರೂಪದರ್ಶಿಯ ಕಥೆ. ನಿನಗೂ ಹೇಳಿರಬೇಕು ಅದನ್ನು ನಾನು. ನೀನು ಹೇಗೆ ಹೀಗಾದೆ?

ನಿನ್ನಪ್ಪ ಕುಡಿದು ಬರುತ್ತಿದ್ದ. ಬಡಿಯುತ್ತಿದ್ದ ಒಮ್ಮೊಮ್ಮೆ. ಆಗೆಲ್ಲ ನೀನು ಹಕ್ಕಿಮರಿಯ ಹಾಗೆ ಮೂಲೆಯಲ್ಲಿ ಪತರುಗುಟ್ಟುತ್ತಿದ್ದೆ. ನಿನ್ನಪ್ಪ ಮಲಗಿದ ಮೇಲೆ, ನನ್ನ ಕಣ್ಣೊರೆಸುತ್ತಿದ್ದೆ. ನನ್ನ ಕಣ್ಣೀರು ನಿನ್ನ ಪುಟಾಣಿ ಬೆರಳುಗಳ ನೇವರಿಕೆಯಿಲ್ಲದೆ ನಿಲ್ಲುತ್ತಿರಲಿಲ್ಲ. ನಿನ್ನಪ್ಪನ ಗೊರಕೆಯ ಹಿಮ್ಮೇಳದಲ್ಲಿ ನಾವಿಬ್ಬರೂ ಒಲೆಯ ಮುಂದೆ ಕೂತು ಹೊಟ್ಟೆತುಂಬ ಉಣ್ಣುತ್ತಿದ್ದೆವು. ಆಗಾಗ ನಾನು ಕೇಳುತ್ತಿದ್ದೆ. ‘ನೀನೂ ಕುಡೀತಿಯಾ? ನಿನ್ನ ಹೆಂಡತಿಯನ್ನು ಬಡೀತಿಯಾ?’ ಎಂದು. ನೀನು ಆಣೆ ಹಾಕುತ್ತಿದ್ದಿ. ಎಂದೂ ಕುಡಿಯೋದಿಲ್ಲ. ಹೊಡಿಯೋದಿಲ್ಲ. ದೊಡ್ಡ ಕಾರು ತಗೊಂಡು ನನ್ನನ್ನು ದೇಶ ಸುತ್ತಿಸುತ್ತಿ ಎಂದಿದ್ದಿ. ಅಂತಹ ಅದೆಷ್ಟೋ ರಾತ್ರಿಗಳಲ್ಲಿ ನಾನು ಕನಸು ಕಾಣುತ್ತಿದ್ದೆ – ನನ್ನ ಮಗ ದೊಡ್ಡ ಮನುಷ್ಯನಾಗುತ್ತಾನೆ. ಪೇಪರ್ನಲ್ಲಿ ಅವನ ಹೆಸರು ಬರುತ್ತೆ... ಓಹ್, ದೇವರೆ.

ನಿನ್ನನ್ನು ಶಾಲೆಗೆ ಸೇರಿಸಿದ್ದ ದಿನ, ಕೆಲಸದ ಮನೆಗಳಿಗೆ ರಜಾ ಹಾಕಿ ದೇವಳಕ್ಕೆ ಹೋಗಿ ಬೇಡಿಕೊಂಡು, ಸಿಹಿ ಅಡುಗೆ ಮಾಡಿದ್ದೆ. ಸರ್ಕಾರಿ ಶಾಲೆ. ಬಡವರ ಗುಡಿ. ಆದರೆ, ಏನಾಯ್ತೋ? ಕಲಿಯಲು ನೀನು ಮುಂದಾಗಲಿಲ್ಲ. ನಿನಗೆ ಕಲಿಸುವ ಶಿಕ್ಷಕರು ಪ್ರೀತಿಯಿಂದ ಕಲಿಸಲಿಲ್ಲವೇ? ಮನೆಯ ತಾಪತ್ರಯ ಬೆಳೀತಿತ್ತು. ನನ್ನ ಆರೋಗ್ಯ ಹದಗೆಡುತ್ತಿತ್ತು. ನಿನಗೆ ನಾನು ಶಾಲೆಗೆ ಬರುವುದು ಬೇಡವಾಗಿತ್ತು. ನಿನ್ನ ಮಾಸ್ತರರನ್ನ ಭೇಟಿಯಾಗುವುದು ಸಿಟ್ಟು ತರಿಸುತ್ತಿತ್ತು. ನನ್ನ ಕಣ್ಣಿಗೆ ಪುಟ್ಟ ಹುಡುಗನಾಗಿದ್ದೆ. ಆದರೆ ನೀನು ದೊಡ್ಡ ಗಂಡಸಿನಂತೆ ವರ್ತಿಸುತ್ತಿದ್ದೆ. ನನ್ನಿಂದ ದೂರಾಗುತ್ತಿದ್ದಿ ಅನ್ನಿಸುತ್ತಿತ್ತು. ನೀನು ಎಲ್ಲಿ ಅಲೀತಿದ್ದಿ, ಏನು ಮಾಡುತ್ತಿದ್ದಿ? ಕೇಳುವಂತಿರಲಿಲ್ಲ. ಶಾಲೆ ಬಿಟ್ಟಾಗಿತ್ತು. ‘ದುಡಿಮೆಗೆ ನಿಂತ’ ಎಂದು ಸಮಾಧಾನ ಪಡಲೇ? ನಿನಗೆ ಮೊಬೈಲ್ ಬಿಟ್ಟರೆ ಬೇರೆ ಪ್ರಪಂಚ ಕಾಣ್ತಿರಲಿಲ್ಲ. ಹಾದಿಬೀದೀಲಿ ಓಡಾಡೋವಾಗ ನಿನ್ನಂಥ ಮಕ್ಕಳನ್ನು ಕೆಕ್ಕರಿಸಿಕೊಂಡು ನೋಡುವ ರೋಗ ಹತ್ತಿತ್ತು ನಂಗೆ. ನೀವೆಲ್ಲ ಕೈಯಲ್ಲಿ ಮೊಬೈಲ್ ಹಿಡಿದು, ಕಿವಿಗೇನೋ ಸಿಕ್ಕಿಸಿಕೊಂಡು, ಗುಂಪು ಸೇರಿ ಏನೇನೋ ನೋಡ್ತಾ ಕಿಸಿಕಿಸಿ ನಗುವುದು... ‘ಮಗ ಕೈಗೆ ಬಂದ’ ಅಂತಿದ್ದರು ಜನ. ನನಗೆ ಮಾತ್ರ, ‘ಮಗ ಕೈ ತಪ್ಪಿದ’ ಅನ್ನಿಸುತ್ತಿತ್ತು. ಅದೆಷ್ಟೋ ರಾತ್ರಿ. ನನ್ನ ಕಣ್ಣೀರು ಬಿಸಿ ಒಲೆಯ ಮುಂದೆ ಕರಕಲಾಗುತ್ತಿತ್ತು. ಮಗನನ್ನು ಹಡೆದ ಸುಖದ ಮತ್ತೊಂದು ಮಗ್ಗುಲಿದು ಎನಿಸುತ್ತಿತ್ತು. ಯಾರೋ ಸಮಾಧಾನ




ಹೇಳುತ್ತಿದ್ದರು. ‘ಏನು, ನಿನ್ನ ಮಗನೊಬ್ಬ ಲೋಕದ ಗಂಡಸರಿಗಿಂತ ಬೇರೆಯಾದಾನಾ?’. ನಾನೂ ಆ ಮಾತನ್ನು ನೆನೆನೆನೆದು ಧೈರ್ಯ ಮಾಡಿಕೊಳ್ಳುತ್ತಿದ್ದೆ. ಮತ್ತೇನು ಮಾಡಬಲ್ಲೆ ಈ ಬಡ ತಾಯಿ?

ನನ್ನ ಕೈಲಿ ಶಕ್ತಿಯಿದ್ದರೆ, ನಾನು ಕಲಿತವಳಾಗಿದ್ದರೆ, ನನ್ನ ಮಗನನ್ನು ‘ಕ್ರಿಮಿನಲ್’ ಮಾಡಿದವರ ವಿರುದ್ಧ ದಾವೆ ಹೂಡುತ್ತಿದ್ದೆ. ಯಾರನ್ನು ದೂರಲಿ? ಮಗನ ದರಕಾರಿಲ್ಲದೆ ಬದುಕಿದ ಅಪ್ಪನನ್ನೇ? ಬಡವರ ಮಕ್ಕಳಿಗೆ ಚೆನ್ನಾಗಿ ಕಲಿಸದ ಶಿಕ್ಷಕರನ್ನೇ? ಕಲಿವ ಕಾಲಕ್ಕೆ ಕೈಲಿ ಮೊಬೈಲ್ ತುರುಕಿಸಿ, ನೋಡಬಾರದ್ದನ್ನೆಲ್ಲ ನೋಡಿಸಿ ಬುದ್ಧಿ ವಿಕೃತಗೊಳಿಸಿದ ಮಾರುಕಟ್ಟೆಯ ಯಜಮಾನ್ಯರನ್ನೇ? ಗಂಡಸು ಎಂದರೆ ಹೀಗ್ಹೀಗೆ ಎಂದು ತಪ್ಪು ಕಲಿಸಿದ ಮಾಧ್ಯಮಗಳನ್ನೇ, ಸಿನಿಮಾಗಳನ್ನೇ, ಜಾಹೀರಾತುಗಳನ್ನೇ? ಚಹಾಕ್ಕಿಂತ ಸಲೀಸು ಸೆರೆ ಸಿಗುವ ಹಾಗೆ ಮಾಡಿದ ಸರ್ಕಾರವನ್ನೇ? ಕಲಿತ ಬಡಮಕ್ಕಳಿಗೆ ಚೂರುಪಾರು ಗೌರವದ ಉದ್ಯೋಗದ ಕನಸೇ ಇಲ್ಲದಂತೆ ಮಾಡಿದವರನ್ನೇ? ಯಾರದೋ ಶ್ರೀಮಂತಿಕೆ ಬೆಳೆಯಲು ನನ್ನ ಮಗ, ಮಗನಂಥವರು ಆ ಮಗಳಂಥವರು ಬಲಿಯಾಗುತ್ತಿದ್ದಾರೆ ಅನ್ನಿಸುತ್ತಿದೆ. ಯಾರಿಗೆ ಹೇಳಲಿ ನನ್ನೆದಿಯ ಬ್ಯಾನಿ? ಅಥವಾ ತಾಯಿಗೆ ಅಂಟಿಕೊಂಡೇ ಬೆಳೆದು, ಹೆಣ್ಣುಗಳೊಂದಿಗೆ ಆಡಿ ಬೆಳೆದು, ಮಾನ—ಮರ್ಯಾದೆಗಳೆಂಬ ಗಡಿಗೆರೆಯನ್ನು ಕಂಡೂ ಹೀಗಾಗಿಹೋದ ನಿನ್ನನ್ನೋ? ಥೂ, ಅಸಹ್ಯವೆನಿಸುತ್ತಿದೆ. ನಿನ್ನ ಬಗ್ಗೆ. ನಿನ್ನಂಥವನಿಗೆ ಜನ್ಮಕೊಟ್ಟ ನನ್ನ ಬಗ್ಗೆ. ನಿನ್ನ ಅಕ್ಕನಂತಹ ಹುಡುಗಿಯನ್ನು ಹೀಗೆ ಹಿಂಸಿಸಿ ಕೊಲ್ಲಲು ಏನೂ ಅನ್ನಿಸಲಿಲ್ಲವೇ? ಒಮ್ಮೆಯೂ ನಿನಗೆ, ನಿನ್ನ ಅವ್ವನ ನೆನಪಾಗಲಿಲ್ಲವಾ? ಅವ್ವನೇ ಬೇರೆ ಹೆಣ್ಣೇ ಬೇರೆ ಅಂತ ಎಲ್ಲಿ ಕಲಿತೆ? ಅಥವಾ ನಿನಗೆ ನನ್ನ ಬಗ್ಗೆ ಕೂಡ ನಿಜವಾದ ಪ್ರೀತಿ ಇರಲಿಕ್ಕಿಲ್ಲ. ಇದ್ದರೆ ನೀನು ಹೀಗಾಗುತ್ತಿರಲಿಲ್ಲ.

ನಿನ್ನೊಂದಿಗೆ ಬೆಸೆದ ನೆನಪುಗಳಿಗೆ ಅಂತ್ಯ ಹಾಡಬೇಕು ಎಂದಷ್ಟೂ ಮುತ್ತುತ್ತಿವೆ ನೆನಪು. ನೀನು ಬಗಲ ಕೂಸಾಗ. ನಿನ್ನನ್ನು ಹೊತ್ತು ದವಾಖಾನೆಗೆ ಹೋಗಿದ್ದೆ. ಮರಳಿ ಬರುವ ಇಳಿಸಂಜೆ ಆ ಬಯಲಲ್ಲಿ ಜನವೋ ಜನ. ಸ್ಟೇಜಲ್ಲಿ, ಕರಿಕಂಬಳಿ ಹೊದ್ದು ಕೆಂಪು ಧೋತರ ಉಟ್ಟವರೊಬ್ಬರು ಏರುದನಿಯಲ್ಲಿ ಹಾಡುತ್ತಿದ್ದರು.

ನೀ ಪಾದಂ ಮೀದ ಪುಟ್ಟು ಮಚ್ಚನೈ ಚೆಲ್ಲೆಮ್ಮಾ  
ತೋಡಬುಟ್ಟಕ ಪೋಯ್ನ  
ನೀ ಋಣಂ ತೀರ್ಚುಕುಂಟನೇ ಚೆಲ್ಲಮ್ಮಾ

ಅಣ್ಣ—ತಮ್ಮಂದಿರಿಲ್ಲದ ನನಗೆ, ನಿನ್ನಪ್ಪನ ಬೀಡಿ—ಸರಾಯಿಯ ಕಮಟಿನಿಂದ ರೋಸಿಹೋಗಿದ್ದ ನನಗೆ, ಆ ದನಿ ಕೊಟ್ಟ ಶಕ್ತಿ ಅಬ್ಬಾ! ಅಂದಿನಿಂದ ಆ ಸಾಲು ನನ್ನ ನಾಲಿಗೆಯಲ್ಲಿ. ಪೂರ್ತಿ ಸೋತೆ ಅಂದುಕೊಂಡ ಗಳಿಗೆಯಲ್ಲಿ ಊರುಗೋಲಿನಂತೆ. ನೀನದನ್ನು ಸಾವಿರಾರು ಸಲ ಕೇಳಿದ್ದಿ. ನೂರಾರು ಬಾರಿ ಗುನುಗಿದ್ದಿ. ನಮ್ಮಿಬ್ಬರ ಕೊರಸ್‌ನಲ್ಲಿ ಹತ್ತಾರು ಬಾರಿ. ಮರೆತೆಯಾ? ಅದ್ಯಾವ ಮರೆವಿನ ಮಹಾರೋಗಕ್ಕೆ ಬಲಿಯಾದೆ? ನಾನು ಮಗನನ್ನು ಹಡೆಯಲಿಲ್ಲ. ವೈರಿಯನ್ನು ಹಡೆದೆ. ಜಗತ್ತು ನಿನ್ನನ್ನು ಪ್ರಾಣಿ ಎಂದು ಉಗಿಯುತ್ತಿದೆ. ಪಾಪ. ಮೂಕ ಪ್ರಾಣಿಗಳು ಇಂಥ ಪಿಶಾಚತನದಲ್ಲಿ ವರ್ತಿಸುವುದಿಲ್ಲ. ಬಯ್ಗಳದ ಸೀಮೆ ದಾಟಿದೆ ನೀನು. ರಾಕ್ಷಸ ಎಂದರೆ...? ರಾಕ್ಷಸ ಗೋತ್ರದ ರಾವಣ, ಸೀತೆಯನ್ನು ಎಂದೂ ಬಲಾತ್ಕರಿಸಲಿಲ್ಲ. ನಿಮ್ಮನ್ನು ಗಲ್ಲಿಗೆ ಹಾಕಿದರೆ, ಎಲ್ಲ ಮುಕ್ತಾಯವಾದಂತೆಯಾ? ಗೊತ್ತಿಲ್ಲ.

ಪೇಪರಿನವರು, ‘ಏನೆನ್ನುತ್ತೀರಿ?’ ಎಂದು ಕೇಳಿದರು. ಏನೆನ್ನಲಿ? ಎಂಥ ಕಠಿಣ ಶಿಕ್ಷೆ ಬೇಕಾದರೂ ಕೊಡಿ. ಅಸಹ್ಯವೆನಿಸುತ್ತದೆ ಅವನು ಮಗ ಎನ್ನಲು ಎಂದೆ. ‘ನೀವು ಬದುಕುತ್ತೀರಾ?’ ಎಂದು ಕೇಳಲಿಲ್ಲ. ಪುಣ್ಯ. ತಾಯಿಯ ಹಂಗು ಹರಿದವನೆ, ಹೇಳುತ್ತೇನೆ ಕೇಳು – ಬದುಕುತ್ತೇನೆ. ನಿನ್ನಂಥ ಪಿಶಾಚಿಗಳ ವಿರುದ್ಧ ಹೋರಾಡುತ್ತ, ನನ್ನ ಗರ್ಭದ ಗೌರವವನ್ನು ನನ್ನಂಥವರ ಹೆಣ್ತನವನ್ನು ಗೌರವಿಸಿಕೊಳ್ಳುತ್ತ – ಇನ್ನೆಂದೂ ನಿನ್ನಂಥ ಮಗ ಹುಟ್ಟದಿರಲಿ ಎಂದು. ಬೆಳೆಯದಿರಲಿ ಎಂದು. ಬದುಕಿ ಬಾಳಬೇಕಾದ ಹೆಣ್ಣಿನ ದುರಂತ ಸಾವಿನ ಯಾತನೆಯನ್ನೇ ಉಸಿರಾಡುತ್ತ.

ಇನ್ನೆಂದೂ ನಿನ್ನ ತಾಯಿಯಲ್ಲ.